

ಸುನೀಲ್ ಕುಮಾರ್









# ಚಿತ್ರಗಾರಗಾರುಡಿ!

**ಸುನೀಲ್ ಕುಮಾರ್ ಚಿತ್ರಗಾರ ವೃತ್ತಿಯಲ್ಲಿ ಶಿಕ್ಷಕರು. ಅವರ ಚಿತ್ರಕಲೆ ಶಾಲೆಯ ಅಂಗಳಕ್ಕೆ ಸೀಮಿತವಾಗದೆ, ಸಾರ್ವಜನಿಕ ಜೀವನವನ್ನೂ ಚೆಲುವಾಗಿಸಿದೆ.**

■ **ರಾಮಕೃಷ್ಣ ಗೋಖಲೆ**

ಹಿರೇಕೆರೂರು ತಾಲ್ಲೂಕಿನ ಕಛವಿ ಗ್ರಾಮದ 'ಸರ್ದಾರ್ ವೀರನಗೌಡ ಪಾಟೀಲ್ ಸರ್ಕಾರಿ ಹೈಸ್ಕೂಲ್'ನಲ್ಲಿ ಸುನೀಲ್ ಕುಮಾರ್ ಚಿತ್ರಗಾರ ಚಿತ್ರಕಲಾ ಶಿಕ್ಷಕರು. ಶಾಲೆಯ ಆವರಣ ಪ್ರವೇಶಿಸುವ ಸಹೃದಯರನ್ನು ಶಾಲಾಗೋಡೆಗಳ ಮೇಲಿನ ಅವರ ಕಲಾಕೃತಿಗಳು ಸ್ವಾಗತಿಸುತ್ತವೆ. ಚಿತ್ರಗಾರ ಅವರು ತಮ್ಮ ರಜಾದಿನಗಳಲ್ಲಿ ಯಾವುದೇ ಫಲಾಪೇಕ್ಷೆ ಇಲ್ಲದೆ ಬಿಡಿಸಿದ ಚಿತ್ರಗಳವು.

ಚಿತ್ರಗಾರರು ಮಣ್ಣಿನಲ್ಲಿ, ತೆಂಗಿನ ಕರಟದಲ್ಲಿ ಉತ್ತಮ ಕಲಾಕೃತಿಗಳನ್ನು ರಚಿಸಬಲ್ಲರು. ಜಲವರ್ಣ, ತೈಲವರ್ಣಗಳೆರಡೂ ಅವರ ಸೃಜನಶೀಲತೆಗೆ ಒದಗಿಬಂದಿವೆ. ಚುಕ್ಕೆ ಚಿತ್ರಗಳ ರಚನೆಯಲ್ಲೂ ಅವರದು ಪಳಗಿದ ಕೈ. ವ್ಯಕ್ತಿಗಳ 'ಸ್ವಭಾವ ಚಿತ್ರ'ಗಳೊಂದಿಗೆ ನಿಸರ್ಗದ ಚೆಲುವನ್ನೂ ಚಿತ್ರಿಸುವುದರಲ್ಲೂ ಅವರು ಸಿದ್ಧಹಸ್ತರು.

ಚಿತ್ರಗಾರರ ಕುಂಚದಲ್ಲಿ ಅರಳಿದ ಸಾಧಕರ ಚಿತ್ರಗಳು ಒಂದೆರಡಲ್ಲ. ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಕನ್ನಡ ಸಾಹಿತಿಗಳ ಚಿತ್ರಗಳನ್ನು ಅವರು ಬಿಡಿಸಿದ್ದಾರೆ. 1986ರ ನಂತರದ ಕನ್ನಡ ಸಾಹಿತ್ಯ ಸಮ್ಮೇಳನಗಳ ಅಧ್ಯಕ್ಷರು ಇವರ ಕುಂಚದಲ್ಲಿ ಮೂಡಿದ್ದಾರೆ. ಸಿದ್ಧಗಂಗಾಮಠದ ಶಿವಕುಮಾರ ಸ್ವಾಮೀಜಿ, ಪುಟ್ಟಪರ್ತಿ ಸಾಯಿಬಾಬಾ, ಕನ್ನಡ ಚಿತ್ರರಂಗದ ಜನಪ್ರಿಯ ನಟರಾದ ರಾಜ್‌ಕುಮಾರ್ ಹಾಗೂ ವಿಷ್ಣುವರ್ಧನ್, ಇವರೆಲ್ಲ ಚಿತ್ರಗಾರರ ಚಿತ್ರಶಾಲೆಯಲ್ಲಿ ಸ್ಥಾನ ಪಡೆದಿದ್ದಾರೆ. ನಾಡಿನ ಹೆಸರಾಂತ ವ್ಯಕ್ತಿಗಳು, ಬರಹಗಾರರು, ವಿಜ್ಞಾನಿಗಳು, ಪ್ರಧಾನ ಮಂತ್ರಿಗಳು, ಮುಖ್ಯಮಂತ್ರಿಗಳು — ಹೀಗೆ ಚಿತ್ರಗಾರರ ಕುಂಚಕ್ಕೆ ಒದಗಿಬಂದವರ ಪಟ್ಟಿ ಮುಂದುವರೆಯುತ್ತದೆ.

ತಮ್ಮ ಕುಂಚದಲ್ಲಿ ಮೂಡಿದ ಕೆಲವು ಸಾಧಕರನ್ನು ಭೇಟಿ ಮಾಡಿ, ಕಲಾಕೃತಿ ಮೇಲೆ ಅವರ ಸಹಿ ಪಡೆದಿದ್ದಾರೆ. ಚಿತ್ರಗಾರರ ಮನೆಯನ್ನು ಪ್ರವೇಶಿಸಿದರೆ, ಕಲಾ ಸಂಗ್ರಹಾಲಯವೊಂದನ್ನು ಪ್ರವೇಶಿಸಿದ ಅನುಭವವಾಗುತ್ತದೆ. ಗೋಡೆಗಳ ತುಂಬಾ ಸಾಧಕರ ಸಾಲುದೀಪಗಳು. ಸಹೃದಯರು, ಚಿತ್ರಕಲಾ ಪ್ರೇಮಿಗಳ ಕಣ್ಣಿಗೆ ಹಬ್ಬ.

ಹಾನಗಲ್ ತಾಲ್ಲೂಕು ಕಚೇರಿಯ ಗೋಡೆಗಳ ಮೇಲೆ ಮೂಡಿಸಿರುವ ವರ್ಲಿ ಚಿತ್ರಗಳು ಕಟ್ಟಡಕ್ಕೆ ಜೀವಕಳೆ ತಂದುಕೊಟ್ಟಿವೆ.

ಚಿತ್ರಗಾರರ ಕಲಾಕೃತಿಗಳ ಪ್ರದೇಶ ಅನೇಕ ಊರುಗಳಲ್ಲಿ ನಡೆದಿದೆ. ತಮಗೆ ತಿಳಿದದ್ದನ್ನು ಆಸಕ್ತರಿಗೆ ಹೇಳಿಕೊಡುವ ಕೆಲಸವನ್ನೂ ಚಿತ್ರಗಾರ ಮಾಡುತ್ತಿದ್ದಾರೆ. ಇಂಥ ಗ್ರಾಮೀಣ ಪ್ರತಿಭೆಗಳೇ ಕನ್ನಡ ನಾಡಿನ ನಿಜವಾದ ಹೆಮ್ಮೆ.

ಪ್ರತಿಕ್ರಿಯಿಸಿ: feedback@sudha.co.in